... ಪೂರ್ಣಮ್ পূর্ণম പൂർണമ് पूर्णम् પૂર્ણમ્ ପୂର୍ଣମ୍ பூர்ணம் పూర్ణమ్ ਪੂਰ੍ਣਮ ...

पूर्णमदः पूर्णमिदं पूर्णात् पूर्णमुदच्यते
पूर्णस्य पूर्णमादाय पूर्णमेवावशिष्यते

**Pūrṇam**

**A Journal of Indian Knowledge Systems**

(website: https://purnam.vercel.app)

Portraying the attempts of scholars and scientists……..

…….. to understand the contributions of Bharatiya Heritage and SAINTists

*Pūrṇam* Vol. 1 No.1 January - June 2025 Pages: 24 - 28 ISSN: 3049-3587 (Print)

# ವಚನ ಸಾಹಿತ್ಯದಲ್ಲಿ ಸಾಮಾಜಿಕ ಸಂವೇದನೆಗಳು

## Social Sensations in *Vachana* Literature

**ಕನ್ಯಾಕುಮಾರಿ. ಎಸ್ Kanyakumari S**

[*ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗ, ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು*-560054
*Department of Humanities, Ramaiah Institute of Technology, Bengaluru – 560054,
Email: kanyaveerappa68@gmail.com]*

**ಪ್ರಬಂಧದ ಸಾರಲೇಖ:**

ಅರಿತು ಮಾಡುವುದು ಕ್ರಿಯೆ, ಅರಿಯದೆ ಮಾಡುವುದು ಕರ್ಮ. "ಕ್ರಿಯೆಯಿಂದ ಸುಜ್ಞಾನ ಸ್ಫೂರಿಸುತ್ತದೆ; ಸುಜ್ಞಾನದಿಂದ ವಿಜ್ಞಾನ ವಿಸ್ತರಿಸುತ್ತದೆ", ಎಂಬ ನುಡಿಯಂತೆ ಜ್ಞಾನ ಮತ್ತು ವಿಜ್ಞಾನಗಳು ಮಾನವನ, ಸಮಾಜದ ಅಭಿವೃದ್ಧಿಯ ಸಂಕೇತಗಳಾಗಿಯಷ್ಟೇ ಅಲ್ಲದೆ, ಜ್ಞಾನದಿಂದುದ್ಭವಿಸಿದ ಕ್ರಿಯೆ, ಆಚರಣೆ, ನಡೆ ನುಡಿಗಳು ಮೌಢ್ಯಗಳ ಅಳಿವಿಗೆ ಕಾರಣಗಳಗಿವೆ; ವಿಶ್ವದ ಪ್ರಗತಿಯ ದ್ಯೋತಕಗಳಾಗಿವೆ. ಮಾನವ ಸಮಾಜದ ಉಗಮವಾದಂದಿನಿಂದಲೂ ವಿವಿಧ ಹಂತಗಳಲ್ಲಿ ವಿಶ್ವ ಪ್ರಗತಿಯಲ್ಲಿ ಮುನ್ನಡೆಯುತ್ತಿರುವುದಕ್ಕೆ ಜ್ಞಾನ-ವಿಜ್ಞಾನಗಳು ಅಡಿಗಲ್ಲಾಗಿವೆ. ಸಾಹಿತ್ಯ ಮತ್ತು ಸಂಸ್ಕೃತಿ ಜ್ಞಾನಾಭಿವೃದ್ಧಿಗೆ ಪೂರಕವಾಗಿವೆ. ಈ ಹಿನ್ನೆಲೆಯಲ್ಲಿ ಸಾಹಿತ್ಯವು ಸಮಾಜಕ್ಕೆ ನೀಡಿರುವ ಕೊಡುಗೆ ಗಮನಾರ್ಹವಾಗಿದೆ.

ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಅಸಮಾನತೆಗಳನ್ನು ಮಾನವ ಇತಿಹಾಸದುದ್ದಕ್ಕೂ ನೋಡುತ್ತಲೇ ಬಂದಿದ್ದೇವೆ. ಮೌಲ್ಯಗಳು ಕ್ಷೀಣಿಸಿ, ಮೌಢ್ಯ, ಅಸಮಾನತೆಗಳು ಅತಿರೇಕದ ಗತಿಯನ್ನು ತಲುಪಿದಾಗ ಸಾಮಾಜಿಕ ಕ್ರಾಂತಿಗೂ ಕಾರಣಗಳಾಗಿವೆ. ಇಂಥಹ ಒಂದು ಕ್ರಾಂತಿ ಹನ್ನೆರಡನೆ ಶತಮಾನದಲ್ಲಿ ಜನತೆಯನ್ನು ಕ್ರಿಯಾಶೀಲವಾಗಿಸುವ, ಒಗ್ಗೂಡಿಸುವ ಶಕ್ತಿಯಾಗಿ ಗೋಚರವಾಯಿತು. ಈ ನಿಟ್ಟಿನಲ್ಲಿ ವಚನ ಸಾಹಿತ್ಯದ ಪಾತ್ರ ದೊಡ್ಡದು. ವಚನ ಸಾಹಿತ್ಯದ ಮೂಲಕ ಬಸವಾದಿ ಶರಣರ ನೇತೃತ್ವದಲ್ಲಿ ಮಾನವ ಚಂತನೆಗಳನ್ನು ವಿಸ್ತರಿಸಿ, ವಿಚಾರ ಪರರನ್ನಾಗಿಸಿ, ವೈಚಾರಿಕ ನಿಲುವುಗಳನ್ನು ರೂಢಿಸಿಕೊಳ್ಳಲು ಸಹಕಾರಿಯಾಯಿತು. "ಜ್ಞಾನದ ಬೆಳಕಿನಿಂದ ಅಜ್ಞಾನದ ಕೇಡು ನೋಡಯ್ಯ" ಎನ್ನುವ ವಚನದಂತೆ ಅರಿವಿನ ನೆಲೆಯಲ್ಲಿ ಸಾಮಾನ್ಯ ಜನರನ್ನು ಸುಜ್ಞಾನಿಗಳನ್ನಾಗಿ ಪರಿವರ್ತಿಸಲು ನಡೆಸಿದ ಅಂದಿನ ಸಂವೇದನಾತ್ಮಕ ಚಿಂತನೆಗಳು ಪ್ರಸ್ತುತ ಸಮಾಜಕ್ಕೆ ನಿದರ್ಶನಗಳಾಗಿವೆ. ವೈಚಾರಿಕ ಹಾಗೂ ವೈಜ್ಞಾನಿಕ ನೆಲೆಯಲ್ಲಿ ಚರ್ಚಿತವಾದ ಈ ಅಂಶಗಳ ಮೇಲೆ ಬೆಳಕು ಚೆಲ್ಲುವುದು ಈ ಲೇಖನದ ಆಶಯವಾಗಿದೆ.

## Abstract:

*Acting with awareness is action; acting without awareness is karma. As the saying goes, action leads to enlightenment, and enlightenment expands into science. Knowledge and science are not only indicators of human and societal progress but also the practices, rituals, and conduct born out of knowledge have contributed to the eradication of superstitions. They are symbols of global advancement. From the origin of human society, knowledge and science have been the foundation for the different stages of global progress. Literature and culture complement the growth of knowledge. In this context, literature's contribution to society is significant.*

*Throughout human history, we have witnessed social, cultural, and economic inequalities; and more so, in the current days. When values diminish and superstition and inequality reach extreme levels, they lead to social revolutions. One such revolution emerged in the 12th century as a unifying and mobilizing force for the people. Through the Vachana literature, led by Basavanna and others, human thoughts were expanded, individuals were inspired to become critical thinkers, and rational perspectives were fostered. As stated in the Vachana, "With the light of knowledge, see the harm of ignorance," the empathetic and reflective ideas of that era aimed to transform common people into enlightened individuals, serving as examples for the present society. This article aims to shed light on these aspects, discussed from both rational and scientific perspectives.*

### ಪೀಠಿಕೆ:

ಕನ್ನಡದ ಮಧ್ಯಕಾಲೀನ ಸಾಹಿತ್ಯವು ಸಾಹಿತ್ಯದ ಇತಿಹಾಸದಲ್ಲಿಯೇ ಕ್ರಾಂತಿಕಾರಕ ಬದಲಾವಣೆಗಳನ್ನು ಹುಟ್ಟು ಹಾಕಿದಂತಹ ಕಾಲ ಎಂದರೆ ತಪ್ಪಾಗಲಾರದು. ಹನ್ನೆರಡನೇ ಶಮಾನದಲ್ಲಿ ವಚನ ಸಾಹಿತ್ಯವು ವೈಚಾರಿಕ ಚಿಂತನೆಗಳ ಅಲೆಯನ್ನು ಹಬ್ಬಿಸಿ, ಸಮಾಜದಲ್ಲಿದ್ದ ಅಂಧಶ್ರದ್ಧೆ, ಅಸಮಾನತೆಗಳ ವಿರುದ್ಧ ಬಂಡೆದ್ದು ಮಾನವೀಯತೆ, ಸಾಮಾಜಿಕ ನ್ಯಾಯವನ್ನು ಸಾರಿದ್ದಲ್ಲದೆ ಅದನ್ನು ಕಾರ್ಯರೂಪಕ್ಕೆ ಇಳಿಸಿತು. ಶರಣರ ವಚನ ಚಳುವಳಿ ಮೂಲಕ ಸಾಮಾಜಿಕ ಜಾಗೃತಿ ಮೂಡಿಸಲು ಯತ್ನಿಸಲಾಯಿತು. ಈ ವಚನ ಚಳುವಳಿಯ ಶಿವಶರಣರ ನುಡಿಗಳೇ ಇಂದು 'ವಚನ ಸಾಹಿತ್ಯ' ಎನ್ನುವ ಪ್ರಕಾರದಲ್ಲಿ ನಮ್ಮ ಮುಂದಿವೆ. ಈ ವಚನಗಳು ಛಂದಸ್ಸು, ಪ್ರಾಸ, ವ್ಯಾಕರಣದ ನಿಯಮಗಳ ಚೌಕಟ್ಟಿಲ್ಲದೆ ಈ ನೆಲದ ಸಾಮಾನ್ಯ ಜನರ ಆಡುಭಾಷೆಯಲ್ಲಿ, ಸೀದಾ ಸಾದಾ ನೇರ ನುಡಿಗಳಲ್ಲಿ ರಚಿತಗೊಂಡು, ಜನಸಾಮಾನ್ಯರ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿರುವ ಸೂಕ್ಷ್ಮ ಸಮಸ್ಯೆಗಳ ಎಳೆಗಳನ್ನು ಮಾರ್ಮಿಕವಾಗಿ ತಿಳಿಸಿವೆ.

ವಚನಗಳು ಹಾಗೂ ವಚನಕಾರರ ಬಗೆಗಿನ ನಮ್ಮ ಗ್ರಹಿಕೆಗಳು ಬಹುಪಾಲು ಸಾಹಿತ್ಯಕವಾಗಿವೆ, ಆರಾಧಕ ನಿಲುವುಗಳಿಂದ ಪ್ರೇರಿತವಾಗಿವೆ. "ವಚನ ಸಾಹಿತ್ಯವು ಭಕ್ತಿಮಾರ್ಗವನ್ನಾಗಿಸಿಕೊಂಡು ವೈಚಾರಿಕತೆಯನ್ನು ಹೊಂದಿ ಪ್ರತಿಭಟನೆ-ಪ್ರತಿಕ್ರಿಯೆಗಳು ವ್ಯಕ್ತಿ ಹಾಗೂ ಸಮಷ್ಠಿ ರೂಪದಲ್ಲಿ ಹೊರಬಂದು ಸಾಮಾಜಿಕ ಕಳಕಳಿಯನ್ನು ಧ್ವನಿಸಿತು. ಒಂದು ಕಾಲಘಟ್ಟದಲ್ಲಿ ಇದ್ದ ಅಸಮಾನತೆ-ಮೌಢ್ಯಗಳ ವಿರುದ್ಧ ಕ್ರಾಂತಿಯ ಕಹಳೆ ಮೊಳಗಿಸಿತು." (ಕನ್ನಡ ಸಾಹಿತ್ಯ-ಸಂಸ್ಕೃತಿ ಕೋಶ)

ಹೊಸಯುಗಕ್ಕೆ ನಾಂದಿ ಹಾಡಿದ ಮಧ್ಯಕಾಲೀನ ಸಾಹಿತ್ಯವು ಕಾಯಕದ ಮಹತ್ವ, ಮೌಢ್ಯಗಳ ನಿರ್ಮೂಲನ ಮೊದಲಾದವುಗಳನ್ನು ಕ್ರಾಂತಿಕಾರಕ ಸಾಧನೆಗಳಾಗಿ ಹೊರಗೆಡಹಿತು. ಆ ಸುಸಂದರ್ಭ ಕರ್ನಾಟಕ ಸಂಸ್ಕೃತಿಯ ಒಂದು ಮಹತ್ತರ ಘಟ್ಟವೇ ಸರಿ. ಈ ವಚನಗಳದ್ದು ಬಹುಶಃ ಇನ್ನಾವ ಭಾರತೀಯ ಭಾಷೆಗೂ ಇಲ್ಲದ ಒಂದು ವಿಶಿಷ್ಟ ರೂಪ. ಅಂತೆಯೇ ವಚನ ಸಾಹಿತ್ಯವು ಹೊಸ ಯುಗದ ಧರ್ಮಪರಂಪರೆಯ ಮೇಲ್ಮೆಗೂ ಕಾರಣವಾಯಿತು. ಬಸವಣ್ಣನವರು ಅನುಸರಿಸಿದ ಕ್ರಾಂತಿಮಾರ್ಗದಲ್ಲಿ ವೈಚಾರಿಕತೆ, ಭೌದ್ಧಿಕತೆ, ವೈಜ್ಞಾನಿಕತೆಗಳು ನಾಸ್ತಿಕ ರೂಪದಲ್ಲಾಗಲಿ, ಸಾಮಾನ್ಯರಿಗೆ ಜಟಿಲವಾಗುವ ಶುದ್ಧಾಂಗ ಜ್ಞಾನರೂಪದಲ್ಲಾಗಲಿ ಅಭಿವ್ಯಕ್ತವಾಗಿರದೇ ಬಸವಣ್ಣನವರ ವಿಚಾರಗಳೆಲ್ಲವು ಪ್ರತಿಯೊಬ್ಬರಿಗೂ ಸಾಧ್ಯವಾಗುವ ಸಹಜ ಕನ್ನಡ ನುಡಿಯಲ್ಲಿ ವಚನಗಳಲ್ಲಿ ಅಭಿವ್ಯಕ್ತವಾದವು. ಇದರ ಪ್ರತಿರೂಪವಾಗಿ ಏಕಕಾಲಕ್ಕೆ ಸಮಾಜಿಕ, ಸಾಂಸ್ಕೃತಿಕ ಸುಧಾರಣೆಗಳು ಸಂಭವಿತವಾದವು ಎಂಬುದು ಅತ್ಯಪೂರ್ವವಾದುದಾಗಿದೆ.

### ಈ ಪ್ರಬಂಧದ ಉದ್ದೇಶಗಳು:

ಸಾಮಾಜಿಕ ಸಮಾನತೆಯ ತತ್ವ, ವ್ಯಕ್ತಿತ್ವ ವಿಕಸನದ ಚಿಂತನೆಗಳನ್ನು ಅವಲೋಕಿಸುವುದು.

ವಚನ ಸಾಹಿತ್ಯದಲ್ಲಿರುವ ಸಾಮಾಜಿಕ ಸಂವೇದನೆ ವಿಚಾರಗಳನ್ನು ಕುರಿತು ವಿಶ್ಲೇಷಿಸುವುದು.

ವಚನ ಸಾಹಿತ್ಯದ ಕಾಯಕತತ್ವ, ಕರ್ಮಸಿದ್ಧಾಂತಗಳನ್ನು ಅರ್ಥೈಸಿಕೊಳ್ಳುವುದು.

ವಚನಗಳಲ್ಲಿ ಅಭಿವ್ಯಕ್ತವಾಗಿರುವ ವೈಚಾರಿಕತೆ ಮತ್ತು ವೈಜ್ಞಾನಿಕ ಚಿಂತನೆಗಳು ಮತ್ತು ಜೀವನ ಮೌಲ್ಯಗಳಿಗೆ ಮಹತ್ವ ನೀಡಿರುವ ಅಂಶಗಳನ್ನು ಗುರುತಿಸುವುದು.

### ಸಮಾನತೆಯ ತತ್ವ, ವ್ಯಕ್ತಿತ್ವ ವಿಕಸನಗೊಳಿಸುವ ಚಿಂತನೆಗಳು:

ಸಾಮಾಜಿಕ ಸಮಾನತೆ ಮತ್ತು ಆರ್ಥಿಕ ಸಮಾನತೆಗಳನ್ನು ಸಾರಿದ ಬಸವಾದಿ ಶರಣರು ಸಮಾಜದಲ್ಲಿದ್ದ ಉಚ್ಛ-ನೀಚ ಶ್ರೇಣೀಕರಣ ಸಂಪ್ರದಾಯಗಳ ವಿರುದ್ಧ ಸಮಾನ ಅವಕಾಶಗಳು ಸಾರ್ವತ್ರಿಕವಾಗುವಂತೆ ಪ್ರತಿಪಾದಿಸಿದರು. ಪ್ರತಿಯೊಬ್ಬರನ್ನು ಗೌರವಿಸುವ ಅಯ್ಯಾ-ಅವ್ವ-ಅಕ್ಕ-ಅಣ್ಣಾ ಎಂಬ ಪದಗಳನ್ನು ವಚನಗಳಲ್ಲಿ ಸಂಬೋಧಿಸಿ, ಜನರ ನಡುವೆ ಗೌರವ ಸಮಾನತೆಯನ್ನು ಹೆಚ್ಚಿಸಿ, "ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ" ಎಂಬ ಬೀಜ ಮಂತ್ರವನ್ನು ಸಾರಿದರು.

ಸಾಮಾಜಿಕ ಅಸಮಾನತೆ, ಸಂಪ್ರದಾಯಕ್ಕೆ ಪ್ರತಿಕ್ರಿಯೆಯಾಗಿ ಬಂದ ವಚನ ಸಾಹಿತ್ಯ ಉಂಟು ಮಾಡಿದ ಅರಿವು ಸಾರ್ವಕಾಲಿಕವಾದುದ್ದು. ಭಾರತೀಯ ಕೆಲ ವರ್ಗಗಳಲ್ಲಿ ಆಚರಣೆಯಲ್ಲಿದ್ದ ಅಂಧಶ್ರದ್ಧೆ, ಕಂದಾಚಾರಗಳ ಜೊತೆಗೆ ಕುಲ-ಜಾತಿ ಮೌಢ್ಯಗಳನ್ನು ಸಮಾಜದಿಂದ ಹೊರಹಾಕಿ ಭಾವೈಕ್ಯತೆಯಿಂದ ಬಾಳಬೇಕೆಂಬ ವಚನಗಳನ್ನು ಭಿತ್ತಿದರು. ಜನರಲ್ಲಿದ್ದ ಅಂಧಾನುಕರಣೆಗಳನ್ನು ಖಂಡಿಸುತ್ತಾ ವಚನಗಳ ಮೂಲಕ ಜಾಗೃತಿ ಮೂಡಿಸುವ ಕ್ರಿಯೆಯನ್ನು ಕಾರ್ಯರೂಪಕ್ಕೆ ತರಲಾಯಿತು. ಆರ್ಥಿಕ ಮೂಲವಾದ ವೃತ್ತಿಗಳಲ್ಲಿದ್ದ ತರತಮ್ಯ ಭಾವನೆಗಳನ್ನು ಕೀಳರಿಮೆಗಳನ್ನು ತೊಡೆದು ಹಾಕಲು ಪ್ರಯತ್ನಿಸಿದರು. ಅದಕ್ಕಾಗಿ ಅನುವಂಶಿಕವಾಗಿದ್ದ ವೃತ್ತಿಗಳನ್ನು ತಮ್ಮ ಹೆಸರಿನಲ್ಲಿ ಅಭಿಮಾನದಿಂದ ಸೇರಿಸಿಕೊಳ್ಳುವ ಪರಿಪಾಠ ಬೆಳೆಸಿದರು. ಎಲ್ಲ ವೃತ್ತಿಗಳು ಸಮಾನವಾದವು, ಮೌಲ್ಯಯುತವಾದವು ಎಂಬ ಭಾವನೆಗಳನ್ನು ಬೆಳೆಸಿದರು. ಕಾಯಕತತ್ವದ ಮೂಲಕ ದುಡಿಮೆಯ ತಾತ್ವಿಕತೆ, ಆರ್ಥಿಕ ಸಮಾನತೆಗಳನ್ನು ತರಲು ಪ್ರಯತ್ನಿಸಿದರು.

'ವ್ಯಕ್ತಿ' ಎಂದರೆ ಸಮಾಜ. ವ್ಯಕ್ತಿಯು ತನ್ನ ತಾನು ಅರಿತುಕೊಂಡರೆ, ಸಮಾಜ ತನಗೆ ತಾನೇ ಸಧೃಡವಾಗುತ್ತದೆ. ಎಂಬ ನಿಲುವುಗಳನ್ನು ತಳೆದಂತಹ ಶರಣರು ಮಾನವ ಕುಲಕ್ಕೆ ಹಿತೈಷಿಯಾದ ಚಿಂತನೆಗಳನ್ನು ಕೇವಲ ನುಡಿಯಲ್ಲಿ ತಾರದೆ ನಡೆದು ತೋರಿ, ಆದರ್ಶಪ್ರಾಯರಾದರು. ಪ್ರತಿಯೊಬ್ಬ ವ್ಯಕ್ತಿಗೂ ತನ್ನತನವೆಂಬುದಿದ್ದು ಆತನ ವಿಶಿಷ್ಟವಾದ ಆಂತರಿಕ ಶಕ್ತಿಯಿಂದ ಒದಗುವಂತಹದ್ದು, ಸಮಾಜದ ಸಕಲ ಜೀವಾತ್ಮರಿಗೂ ಲೇಸಬಯಸಬೇಕೆಂಬುದನ್ನು ಮನಗಂಡು ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ನಾಂದಿ ಹಾಡಿದರು. ವಚನ ಎಂದರೆ ಪ್ರಮಾಣ ಎಂಬ ಅರ್ಥದಂತೆ ಪ್ರಮಾಣೀಕರಿಸಿದ ಅವರ ಅನುಭವದ ಮಾತುಗಳನ್ನು ಅಭಿವ್ಯಕ್ತಗೊಳಿಸಿ, ಸಾಹಿತ್ಯವಾಗಿ ರೂಪುಗೊಳಿಸಿದರು.

'ಅಂತರಂಗದ ವಿಕಾಸವಾಗದ ಹೊರತು ಮನುಷ್ಯ ಜನ್ಮ ಸಫಲವಾಗದು' ಎಂಬ ಮಾತು ಅಕ್ಷರಷಃ ಸತ್ಯ. ಪ್ರಸ್ತುತ ಸಮಾಜದಲ್ಲಿ ನಾಗರೀಕತೆಯ ಪ್ರಭಾವ, ವಿಜ್ಞಾನ, ತಂತ್ರಜ್ಞಾನಗಳ ಪ್ರಭಾವದಿಂದ ವ್ಯಕ್ತಿಯ ಬಹಿರಂಗದ ಪ್ರಗತಿ ಆಧುನಿಕವಾಗಿದೆಯಾದರೂ ಮೌಲ್ಯಗಳು ನಶಿಸುತ್ತಿರುವುದು ದುರಂತವೇ ಸರಿ, ಆದ್ದರಿಂದ ಸಾರ್ವಕಾಲಿಕ ಮೌಲ್ಯಗಳನ್ನೊಳಗೊಂಡ ಸಾಹಿತ್ಯದ ಮುಖೇನ ಅಂತರಂಗದ ತತ್ವವನ್ನು ವಿಕಾಸಗೊಳಿಸಿಕೊಳ್ಳುವ ಸಂಸ್ಕೃತಿ ಇಂದಿನ ಸಮಾಜಕ್ಕಿದೆ. ಅಂತೆಯೇ ವ್ಯಕ್ತಿಯ ವ್ಯಕ್ತಿತ್ವ ವಿಕಸನದ ಪ್ರಕ್ರಿಯೆಗೆ ಈ ಅಂಶಗಳು ಅಗತ್ಯ ಎಂಬುದನ್ನ ನಮ್ಮ ಪಾರಂಪರಿಕ ವಿಜ್ಞಾನಗಳು ಸಹ ಹೇಳುತ್ತಿವೆ.

ಹುಟ್ಟಿ ಬೆಳೆಯುತ್ತಾ ಪರಾವಲಂಬಿಯಾಗುವ ಮಾನವ ಆಂತರ್ಯದ ಯೋಗ ಜ್ಞಾನದಿಂದ ಮಾನವ ಸ್ವಾವಲಂಬಿಯಾಗುವ ಪರಿಕಲ್ಪನೆ ಅನನ್ಯ. 'ನೀನೊಲಿದಡೆ ಕೊರಡು ಕೊನರುವುದಯ್ಯಾ, ನೀನೊಲಿದೊಡೆ ವಿಷವೆಲ್ಲಾ ಅಮೃತವಾವುದಯ್ಯಾ' ಎಂಬ ವಚನದಲ್ಲಿ ಸಾಂಕೇತಿಕವಾಗಿ ವ್ಯಕ್ತಿಯ ಆಂತರಿಕ ಬೆಳವಣಿಗೆಯ ಮಹತ್ವವನ್ನು ಸೂಚಿಸಲಾದೆ. ಸಾಮಾನ್ಯವಾಗಿ ಹುಟ್ಟಿನಿಂದಲೂ ದೇವರನ್ನು ಅವಲಂಬಿಸಿ ಬದುಕುವ ಮಾನವನಿಗೆ ಬಹಿರಂಗದ ದೇವರು ಕೊರಡನ್ನು ಕೊನರಿಸಬಹುದಾಗಿತ್ತು. ಆದರೆ ಕೊರಡಿನಂತಿರುವ ಕಾಯ ಕೊನರಬೇಕಾದರೆ ವ್ಯಕ್ತಿಯ ಆತ್ಮಸ್ಥೈರ್ಯದ ಅಂತರ್ಯದ ಜ್ಞಾನದ ಮುಖಾಂತರ ಸಾಧ್ಯ ಎಂಬ ತಿಳಿವು ಬರುತ್ತದೆ. ಅಂದರೆ ಅಂತರಂಗದ ಅರಿವಿನಿಂದ ಸ್ವಾವಲಂಬನೆಯನ್ನು ಸಾಧಿಸಬಹುದೆಂಬ ಆಶಯವನ್ನು ವಚನಗಳಲ್ಲಿ ಕಾಣ ಬಹುದಾಗಿದೆ.

ಪ್ರಸ್ತುತದ ವಿಜ್ಞಾನದ ಅವಿಷ್ಕಾರಗಳು (ದೂರವಾಣಿ, ದೂರದರ್ಶನ, ಗಣಕಯಂತ್ರ, ಮೊಬೈಲ್ ಇತ್ಯಾದಿ) ಆಧುನಿಕ ತಂತ್ರಜ್ಞಾನಗಳು ಸಾಧಾರಣ ವ್ಯಕ್ತಿಯ ಕಲ್ಪನೆಗೂ ನಿಲುಕದ ಅದ್ಭುತ ಸಾಧನೆಗಳು. ಆದರೆ ಬಹಿರಂಗದ ಬೆಳವಣಿಗೆಯೊಂದೆ ಮಾನವನ ಗುರಿ ಸಾಧನೆಯಾಗಲಾರದು. ಅಂತರಂಗದ ಬೆಳಣಿಗೆಯಾದಾಗ ಮಾತ್ರ ಪರಿಪೂರ್ಣತೆ ಸಾಧ್ಯ. ಯಾವುದೇ ವಿಚಾರ, ಸಾಹಿತ್ಯ ಧರ್ಮಗಳು ಮಾನವನನ್ನು ಮೌಢ್ಯತೆಯಿಂದ ವೈಚಾರಿಕತೆಯೆಡೆಗೆ, ಅಜ್ಞಾನದಿಂದ ಸುಜ್ಞಾನದೆಡೆಗೆ, ಅಪಕ್ವತೆಯಿಂದ ಪರಿಪಕ್ವತೆಯೆಡೆಗೆ ಕೊಂಡೊಯ್ಯಬೇಕು. ಅಪಕ್ವವಾದ ಚಿಂತನೆಗಳನ್ನು ಮನಸ್ಸು ಸತ್ವಗೊಳಿಸುವಂತಾಗಬೇಕು. ಆಗ ಮನುಷ್ಯ ಪರಿಪೂರ್ಣನಾಗಲು ಸಾಧ್ಯ. ವಚನ ಸಾಹಿತ್ಯವು ಈ ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವ ವೈಚಾರಿಕತೆಯ ಹೊಸ ಅರ್ಥವನ್ನು ನೀಡುತ್ತದೆ.

## ವಚನ ಸಾಹಿತ್ಯದಲ್ಲಿ ಸಾಮಾಜಿಕ ಸಂವೇದನೆಗಳು:

"ಸಾಮಾಜಿಕ ಅರಿವು- ಸಮಾಜದ ಅಭಿವೃದ್ಧಿಯ ಚಿಂತನೆಗೆ ಸಮಾನಾಗಿದೆ" ಆದ್ದರಿಂದಲೇ ವಚನಕಾರರು ಸಮಾಜವನ್ನು, ಪರಿಸರವನ್ನು ತೆರೆದ ಕಣ್ಣಿನಿಂದ ನೋಡಿ ಸಮಾಜದಲ್ಲಿ ಬೇರುಬಿಟ್ಟಿದ್ದ ಕೊಳೆಯನ್ನು ತೊಳೆದು ಆರೋಗ್ಯವಂತ ಸಮಾಜಕ್ಕಾಗಿ ದುಡಿದು, ಇಡೀ ಮಾನವ ಸಮುದಾಯವನ್ನು ಅರಿವಿನ ಚಿಂತನೆಗೆ ತೊಡಗಿಸಿ, ಸಮಾಜದಲ್ಲಿ ತಾಂಡವವಾಡುತ್ತಿದ್ದ ಅಸಮಾನತೆ, ಜಾತಿವ್ಯವಸ್ಥೆ ಡಂಭ, ವರ್ಗಭೇದ ಅನ್ಯಾಯಗಳನ್ನು ನಿರ್ಭೆಡೆಯಿಂದ ಎತ್ತಿ ತೋರಿ ಸಾಮಾಜಿಕ ಅರಿವನ್ನು ಸ್ಥಾಪಿಸುವ ಪ್ರಯತ್ನ ನಡೆಸಿ ಯಶಸ್ವಿಯಾದರು. ಸಾಮಾಜಿಕ ಬದಲಾವಣೆಯ ಅಪಾರವಾದ ಕಾಳಜಿಯೊಂದಿಗೆ ಹೊಸ ಅಲೋಚನೆ ಉತ್ಸಾಹಗಳಿಂದ ಸುಭದ್ರ ಸಮಾಜ ನಿರ್ಮಾಣದ ಕನಸನ್ನು ಕಂಡು ಕಾಯಕದಿಂದಲೇ ಕೈಲಾಸವನ್ನು ಕಂಡುಕೊಂಡಿದ್ದು, ದೇಹವನ್ನೇ ದೇಗುಲವಾಗಿಸಿ, ಅಭಿವ್ಯಕ್ತಿಗಳನ್ನೇ ಅನುಭವ ಮಂಟಪವಾಗಿಸಿ, ಹೆಣ್ಣು-ಗಂಡು ಭೇದಭಾವವಿಲ್ಲದೆ, ಕುಲದ ತಾರತಮ್ಯ ಮಾಡದೆ, 'ಮೌಢ್ಯತೆ' ಗಳನ್ನು ಹೊರಹಾಕಿ, ಹೊಸ ಚಿಂತನೆಗಳನ್ನು ರೂಪಿಸಿ, ಸಮಾಜಕ್ಕೊಂದು 'ಅರಿವಿನ' ಸ್ವರೂಪವನ್ನಿತ್ತ ಆ ಸಂಧರ್ಭ ಇತಿಹಾಸದಲ್ಲಿಯೇ ಮಹತ್ವಪೂರ್ಣವಾದ ಕಾಲ.

"ವ್ಯಕ್ತಿ ಶುದ್ಧನಾಗದೆ ಸಮಾಜ ಶುದ್ಧವಾಗದು" ಎಂದು ನಂಬಿದ್ದ ಬಸವಣ್ಣನವರು ಅಂತರಂಗ ಬಹಿರಂಗ ಶುದ್ಧಿಗಳನ್ನೇ ತಮ್ಮ ಧರ್ಮದ ಜೀವಾಳವನ್ನಾಗಿ ಮಾಡಿಕೊಂಡು ವಚನಗಳನ್ನು ರಚಿಸಿದರು. 'ಕಳಬೇಡ, ಕೊಲಬೇಡ: ಹುಸಿಯನುಡಿಯಲು ಬೇಡ ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ" (ವಚನ ಸಾರ) ಎನ್ನುವ ಸರಳ ನಡೆಗಳನ್ನು ವ್ಯಕ್ತಿಗತಗೊಳಿಸಿಕೊಳ್ಳುವ ಮಾರ್ಗಗಳನ್ನು ತೋರಿಸಿಕೊಟ್ಟರು.

ಸಮಸಮಾಜದ ನಿರ್ಮಾಣಕ್ಕೆ ನಿಜಶತ್ರುಗಳೆಂದರೆ ಮಾನವನ ನೈತಿಕತೆಗಳ ಅಧಃಪತನ ಹಾಗೂ ಸಾಮಾಜಿಕ ಅಸಮಾನತೆ, ಮೌಢ್ಯಗಳು. ಹಾಗಾಗಿ ಸಾಮಾಜಿಕ ಮೌಢ್ಯ ಹಾಗೂ ದ್ವಂದ್ವಗಳನ್ನು ತೊಡೆದುಹಾಕಲು ಒಂದು ಹೊಸ ಅರಿವಿನ ನೆಲೆಯನ್ನು ವಚನ ಸಾಹಿತ್ಯವು ಸೂಚಿಸುತ್ತದೆ. ಧಾರ್ಮಿಕ ಪ್ರಜ್ಞೆಯ ನೆಲೆಯಿಂದ ನೈತಿಕ ಪ್ರಜ್ಞೆಯ ನೆಲೆಗೆ ವಿವರಣೆಗಳನ್ನು ಪಲ್ಲಟಗೊಳಿಸಿ, ನೈತಿಕ ನಡವಳಿಕೆ ಮೂಲಕ ದೇವರನ್ನು ಸೇರಬಹುದು" ಎಂಬ ಬಸವಣ್ಣನವರ ನುಡಿ-ನಂಬಿಕೆ ಅವರ ವಚನಗಳ ಜೊತೆಗೆ ಆಚರಣೆಗಳಲ್ಲಿ ಅಭಿವ್ಯಕ್ತವಾಗುತ್ತವೆ. "ಆಚಾರವೇ ಸ್ವರ್ಗ, ಅನಾಚಾರವೇ ನರಕ; ಮರ್ತ್ಯ ಲೋಕ, ದೇವಲೋಕ ಬೇರಿಲ್ಲ ಕಾಣಿರೋ;" ಎಂಬ ಸರಳ

ನೀತಿಗಳು ವಚನಗಳ ರೂಪದಲ್ಲಿ ಪ್ರತಿಬಿಂಬಿಸಿ, ಸಾಮಾಜಿಕ ಅರಿವನ್ನು ಮೂಡಿಸುತ್ತವೆ.

ವಚನಕಾರರು ಅಂದಿನ ಸಮಾಜದಲ್ಲಿದ್ದ, **ಸಮಸ್ಯೆಗಳ ಪರಿಹಾರದ** ಕನಸು ಕಂಡಿದ್ದವರು ಸಾಂಸ್ಕೃತಿಕ ಅಂಶಗಳನ್ನೂ ಆಲೋಚಿಸಿದ್ದವರು. ಅವರ ಆಲೋಚನೆಯು ಕೇವಲ ವಿಚಾರ ಸೀಮಿತವಾಗಿರದೆ ಅನುಷ್ಠಾನ ಮುಖಿಯಾಗಿದ್ದವು. ಒಂದೆಡೆವೈಯುಕ್ತಿಕ ತುರ್ತಿನ ಅಭಿವ್ಯಕ್ತಿ, ಮತ್ತೊಂದೆಡೆ ಸಾಮೂಹಿಕ ಜರೂರಿನ ಬಗೆಗಿನ ಚರ್ಚೆ, ಈ ರೀತಿಯಾಗಿ ಸಾಮಾಜಿಕ ಬದಲಾವಣೆಯ ಮಹತ್ವದ ಗುರಿಯನ್ನಿರಿಸಿಕೊಂಡು ರಚಿತವಾದ ವಚನ ಸಾಹಿತ್ಯದ ಚಿಂತನೆಯು ಉತ್ತಮ ಸಮಾಜಿಕ ವ್ಯವಸ್ಥೆಯ ಪರಿಕಲ್ಪನೆಯದ್ದಾಗಿತ್ತು. "ಸಾಮಾಜಿಕ ಬದುಕು ನಂಬಿದ್ದ ಧಾರ್ಮಿಕ ಮೌಲ್ಯಗಳಿಗಿಂತ ಬೇರೆ ರೀತಿಯಲ್ಲಿ ಕಂಡು ಬಂದಂತ ಆಚರಣೆ-ಪದ್ಧತಿಗಳು ಹಾಗೂ ಸಮಾಜದ ದಿಕ್ಕನ್ನು ತಪ್ಪಿಸುವಂತ ಸಮಾಜವನ್ನು ಎಚ್ಚರಿಸುವ, ಬುದ್ಧಿ ಹೇಳುವ ಹೊಸ ಪ್ರಜ್ಞೆ ಮೂಡಿಸುವ, ಮತ್ತು ವಿಮರ್ಶಿಸುವ ಬದಲಾವಣೆಗಳನ್ನು ವಚನಕಾರರು ಪ್ರದರ್ಶಿಸಿದರು.

ಸಮಾಜದಲ್ಲಿ ಅಂದು ವ್ಯಾಪಿಸಿದ್ದ ಕಟ್ಟು ನಿಟ್ಟಾದ ಸಾಮಾಜಿಕ ವ್ಯವಸ್ಥೆಗಳನ್ನು, ಅದನ್ನನುಸರಿಸಿದ ಅಂಧಾಭಿಮಾನಗಳನ್ನು ಶಿಥಿಲಗೊಳಿಸಲು ಬಸವಣ್ಣನವರಂತಹ ವಚನಕಾರರು ಕರ್ಮಸಿದ್ಧಾಂತ ಹಾಗು ಕಾಯಕ ತತ್ವಗಳನ್ನು ಭಿತ್ತಿದರು, 'ಕಾಯಕವೇ ಕೈಲಾಸ' ಎಂಬ ಜೀವನಾದರ್ಶದ ನುಡಿಗಳು ವಚನಗಳಲ್ಲಿ ಪ್ರತಿಬಿಂಬಿಸಿ, ಕಾರ್ಯರೂಪಕ್ಕೆ ತಂದರು. ಅಂದಿನ ಸಮಾಜದಲ್ಲಿ ಕುಲಕಸುಬು ಜಾತಿಯಾಧಾರಿತ ಉದ್ಯೋಗ ವ್ಯವಸ್ಥೆ ಪ್ರಧಾನವಾಗಿದ್ದು, ವೃತ್ತಿ ತಾರತಮ್ಯವಿದ್ದ ಅಸಮಾನತೆಗಳು ಆವರಿಸಿದ್ದವು. ವ್ಯಕ್ತಿ ಸಮಾನತೆಯನ್ನು ಹಾಗೂ ಎಲ್ಲ ವೃತ್ತಿಗಳ ಮಹತ್ವವನ್ನು ಸಮಾಜಕ್ಕೆ ಎತ್ತಿ ತೋರಿಸುವ ಉದ್ದೇಶದಿಂದ 'ಕಾಯಕ' ತತ್ವವನ್ನು ರೂಪಿಸಿ, ಕಾಯಕಮಾಡುವುದು ಕೈಲಾಸಕ್ಕೆ ಸಮಾನವೆಂದು ಹೇಳಲಾಯಿತು. "ಜೀವನಾವಶ್ಯಕ ವೃತ್ತಿಗೆ ಅಧ್ಯಾತ್ಮಿಕ ಲೇಪನವನ್ನು ಮಾಡಿ, ಅದನ್ನೇ 'ಕಾಯಕ' ಎಂಬ ಪರಿಕಲ್ಪನೆಯಾಗಿ ಜನರ ಮುಂದಿಟ್ಟರು" ಅಲ್ಲದೆ ಸಮಾಜದ ಒಳಿತಿಗಾಗಿ ವೈಯುಕ್ತಿಕ ಹಿತಾಸಕ್ತಿಗಳನ್ನು ತೊರೆದು ವರ್ಗಗಳ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ಸಮಾಜದ್ದೆಂದು ಪರಿಗಣಿಸಿ ಕಾಯಕ ತತ್ವಕ್ಕೆ ಪೂರಕವಾದ 'ದಾಸೋಹ' ಪರಿಕಲ್ಪನೆ ಮುಂದಿಟ್ಟರು.

ವಚನಕಾರರು ಜನಸಾಮಾನ್ಯರಿಗೆ ಕೇವಲ ಆದರ್ಶವಾಗಿ ಉಳಿಯುವ ಮಾತನ್ನು ಹೇಳಲಿಲ್ಲ. ದೈನಂದಿನ ಜೀವನಕ್ಕೆ ಅಗತ್ಯವಾದ ದುಡಿಮೆ ಮತ್ತು ದುಡಿದುದನ್ನು ಹಂಚಿ ತಿನ್ನುವ, ಅಹಂಕಾರವನ್ನು ಕಳೆದುಕೊಂಡು ದಾಸೋಹ ಭಾವದಿಂದ ಸಮಾಜಕ್ಕೆ ಅರ್ಪಿಸುವ ತತ್ವಗಳನ್ನು ಹಾಗು ಇಂದಿನ ಯುಗದಲ್ಲೂ ಸಾಧಿಸಬಹುದಾದ ಮಾರ್ಗಗಳನ್ನು ತಿಳಿಸಿಕೊಟ್ಟರು. ಶ್ರೇಣಿಕೃತ ಸಮಾಜವನ್ನು ಪೋಷಿಸಿದ್ದ 'ಕರ್ಮಸಿದ್ಧಾಂತವನ್ನು ವಿರೋಧಿಸಿ ಕಾಯಕ ಸಿದ್ಧಾಂತವನ್ನು ಪರಿಚಯಿಸಿದರು. ಹುಟ್ಟಿನ ಆಧಾರದ ಮೇಲೆ ನಿಂತಿದ್ದ ಕುಲಕಸುಬು, ಜಾತಿ-ವರ್ಣ ಭೇದ ನಿಯಮಗಳನ್ನು ನಿರಾಕರಿಸಿ, ವ್ಯಕ್ತಿ ಯಾವುದೇ ವೃತ್ತಿಯನ್ನು ಜೀವನ ನಿರ್ವಹಣೆಗಾಗಿ ಆಯ್ದುಕೊಳ್ಳುವ ಕಾಯಕ ತತ್ವವನ್ನು ಅನುಕರಣೆಗೆ ತರಲಾಯಿತು.

## ವೈಚಾರಿಕತೆ ಮತ್ತು ವೈಜ್ಞಾನಿಕ ಚಿಂತನೆಗಳು:

ವೈಜ್ಞಾನಿಕ ಚಿಂತನೆಗಳನ್ನು ನೆಲೆಗೊಳಿಸಿ ಅವೈಜ್ಞಾನಿಕ ಆಚರಣೆಗಳನ್ನು ಸಮಾಜದಿಂದ ಹೊರಹಾಕುವಲ್ಲಿ ವಚನಕಾರರು ಕೈಗೊಂಡ ಅವಿರತ ಪ್ರಯತ್ನಗಳು ಅವಿಸ್ಮರಣೀಯವಾಗಿವೆ. ಚಲನಶೀಲ ಬದುಕಿನಲ್ಲಿ ಬದಲಾವಣೆ ನಿರಂತರವಾದುದು, ಅದು ಜೀವಂತಿಕೆಯ ಲಕ್ಷಣವು ಹೌದು. ಅಂತೆಯೇ ಸಾಹಿತ್ಯದಲ್ಲಿಯೂ ಕಾಲಕಾಲಕ್ಕೆ ಬದಲಾವಣೆ ನಡೆಯುತ್ತಿರುತ್ತದೆ. ವಚನ ಮಾರ್ಗ ಆರಂಭವಾದಂದಿನಿಂದ ಜನಸಾಮಾನ್ಯರ ಬದುಕಿನ ಬದಲಾವಣೆಗಾಗಿ ಅನೇಕ ದೃಷ್ಟಿಕೋನದಿಂದ ಬದುಕಿನತ್ತ ಮುಖ ಮಾಡಿತು. ಸಮಾಜದಲ್ಲಿ ಕಂಡುಬರುವ ಅವೈಜ್ಞಾನಿಕ ನಂಬಿಕೆಗಳನ್ನು ಗುರುತಿಸಿ ಅವುಗಳನ್ನು ವಚನಗಳಲ್ಲಿ ವೈಜ್ಞಾನಿಕ/ವೈಚಾರಿಕ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಯಿತು. ಬಸವಾದಿ ಶರಣರು ಸಮಾಜದ ಶೋಧನೆಗೆ ಮುಂದಾಗಿ'ಮೌಢ್ಯತೆ'ಗಳನ್ನು ಹೊರಹಾಕಿ, ಹೊಸ ಚಿಂತನೆಗಳನ್ನು ರೂಪಿಸಿ, ವೈಜ್ಞಾನಿಕವಾಗಿ ವಿಚಾರಮಾಡುವಂತೆ ವಿಚಿಕಿತ್ಸಕ ಬುದ್ಧಿಯನ್ನು ರೂಢಿಸಿಕೊಳುವಂತೆ ಜನರನ್ನು ಪ್ರೇರೆಪಿಸಿದರು. ಮೂಢನಂಬಿಕೆಗಳಿಗೆ ದಾಸರಾಗಿ ತಮ್ಮ ನೆರಳಿಗೇ ತಾವು ಹೆದರುತ್ತಿದ್ದಂತ ಜನರನ್ನು ಕಂಡು ವಚನಕಾರರು- ಅರ್ಥಹೀನ ವಿಚಾರಗಳಿಂದ ಹೊರಬಂದು ವೈಚಾರಿಕತೆ ಬೆಳೆಸಿಕೊಳ್ಳುವಂತೆ ವೈಜ್ಞಾನಿಕವಾಗಿ ವಿಚಾರಮಾಡುವಂತೆ ವಿಚಿಕಿತ್ಸಕ ಬುದ್ಧಿಯನ್ನು ಜನರಲ್ಲಿ ಪ್ರೇರೆಪಿಸಿದರು.

ಪ್ರಸ್ತುತದಲ್ಲಿ ಆಧುನಿಕ ವಿಚಾರಗಳನ್ನಿಟ್ಟುಕೊಂಡು ಮಾಡಿದ ಅವಿಷ್ಕಾರಗಳಿಂದಾದಂತ ನಿಯಮಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ನಿತ್ಯ ಜೀವನಕ್ಕೆ ಅಗತ್ಯವಾದ ವೈಜ್ಞಾನಿಕ ವೈಚಾರಿಕ ತುರ್ತು ನಮ್ಮ ಮುಂದಿದೆ. ಎಲ್ಲಾ ವೈಜ್ಞಾನಿಕತೆಗೂ ಪಾಶ್ಚಾತ್ಯ ಪ್ರಭಾವವೆಂದೇ ಅನುಸರಿಸುತ್ತಿರುವ ನಮಗೆ ನಮ್ಮ ಪೂರ್ವಜರ ಜ್ಞಾನದ ಅರಿವೇ ಇರುವುದಿಲ್ಲ. ಸಾಹಿತ್ಯದ ಮೂಲಕ ಒರೆಹಚ್ಚಿದಾಗ ಇಂತಹ ಎಷ್ಟೋ ವೈಜ್ಞಾನಿಕ ಅಂಶಗಳು ಅನುಷ್ಠಾನವಾಗಿ ಅನುಕರಣೆಗಳಾಗಿರುವುದನ್ನು ಕಂಡುಕೊಳ್ಳಬಹುದು. ಅಂತೆಯೇ ಶರಣರು ಆಚರಣೆಗೆ ತಂದಿದ್ದ, ಅನುಕರಿಸಿದ್ದದ್ದ ಎಷ್ಟೋ ವೈಜ್ಞಾನಿಕತೆಯ ಅಂಶಗಳನ್ನು ತಿಳಿಯುವ ಪ್ರಯತ್ನ ಮಾಡಿದಾಗ ಪರಿಸರದ ಅಗತ್ಯತೆ ಅನಿವಾರ್ಯಗಳನ್ನು ಪ್ರಿಯವಾಗುವಂತೆ ವಚನಗಳ ಧಾಟಿಯಲ್ಲಿ ರಚಿಸಿ, ಜನಸಾಮಾನ್ಯರನ್ನು ಎಚ್ಚರಗೊಳಿಸಲು ಮಾಡಿದ ಪ್ರಯತ್ನಗಳು ಗಮನಸೆಳೆಯುತ್ತವೆ. ಕಾಲಮಾನಕ್ಕೆ ತಕ್ಕಂತೆ ಹಲವಾರು ಬದಲಾವಣೆಗಳನ್ನು ಯಾವುದೇ ತೋರಿಕೆಯ ಆರ್ಭಟಗಳಿಲ್ಲದೆ ವಾಸ್ತವಿಕ ನೈಜ ಜೀವನದಲ್ಲಿ ಸಮಾಜದ ಪ್ರಯೋಗಾಲಯದಲ್ಲಿ ಜನಸಾಮಾನ್ಯರಿಗೆ ಕಟ್ಟಿಕೊಟ್ಟಿರುವುದು ಇಲ್ಲಿನ ವಿಶೇಷ.

ವಚನಕಾಲದಲ್ಲಿ ವೈದ್ಯ ಸಂಗಣ್ಣನೆಂಬ ಆಯುರ್ವೇದ ವಿಜ್ಞಾನ ತಿಳಿದಿದ್ದನೆಂಬುದು ಅಲ್ಲದೆ ಅವರ ಮಾತಿನಲ್ಲಿ ವೈದ್ಯ ಎಷ್ಟೇ ಪರಿಣಿತನಾದರು ರೋಗಕ್ಕೆ ಚಿಕತ್ಸೆ ಮಾಡುವುದಷ್ಟೇ, ಮರಣಕ್ಕೆ ಔಷದಿ ಕೊಡಲಾರದೆಂಬ ವಿಚಾರಗಳು ವಿಜ್ಞಾನ ಹಾಗೂ ಮನೋವಿಜ್ಞಾನಗಳ ಪ್ರಾಮುಖ್ಯತೆಯನ್ನು ತಿಳಿಸುತ್ತವೆ. ಇವರ ಆಲೋಚನೆಗಳಲ್ಲಿ ಮನೋಬಲಕ್ಕೆ ವೈಚಾರಿಕತೆಯ ಮಾರ್ಗವನ್ನು ಸಾಂಕೇತಿಕವಾಗಿ ಸೂಚಿಸಿದ್ದಾರೆ. ವಚನಕಾರ ಸಿದ್ಧರಾಮನ ನುಡಿಯಲ್ಲಿರುವಂತೆ "ವ್ಯಾಧಿಗೆ ಔಷಧವ ಕೊಡರಲ್ಲದೆ, ಮರಣಕ್ಕೆ ಔಷಧಿ ಕೊಡುವರಾರು ಇಲ್ಲ" ಎನ್ನುವುದು ಸಾಂಕೇತಿಕವಾಗಿ ವಿಚಾರವಂತಿಕೆಯನ್ನು ಸ್ವ ಪ್ರಯತ್ನದಿಂದ ರೂಢಿಸಿಕೊಳ್ಳಬೇಕು ಎನ್ನುವ ಸಾರ್ವತ್ರಿಕ ಸತ್ಯವಾಗಿದೆ.

"ಸಾಮಾಜಿಕ ಬದುಕು ನಂಬಿದ್ದ ಮೌಲ್ಯಗಳಿಗಿಂತ ಬೇರೆ ರೀತಿಯಲ್ಲಿ ಕಂಡು ಬಂದಂತ ಆಚರಣೆ-ಪದ್ಧತಿಗಳು ಹಾಗೂ ಸಮಾಜದ ದಿಕ್ಕನ್ನು ತಪ್ಪಿಸುವಂತ 'ಮಾಢ್ಯತೆ'ಗಳ ವಿರುದ್ಧ ಸಮಾಜವನ್ನು ಎಚ್ಚರಿಸುವ, ಬುದ್ಧಿ ಹೇಳುವ ಹೊಸ ಪ್ರಜ್ಞೆ ಮೂಡಿಸುವ, ವೈಜ್ಞಾನಿಕ ಚಿಂತನೆಗಳನ್ನು ಹುಟ್ಟುಹಾಕುವಂತಹ ಕಾರ್ಯಗಳು ವಚನ ಸಾಹಿತ್ಯದ ಕಾಲದಲ್ಲಿ ಪ್ರಚಲಿತವಾದವು. ವಿಜ್ಞಾನದೊಂದಿಗೆ ವೈಚಾರಿಕತೆಯನ್ನು ರೂಢಿಸಿಕೊಳ್ಳಲು ಮೌಢ್ಯತೆಗಳನ್ನು ಟೀಕಿಸಿ ಅಲ್ಲಗಳೆದು, ವೈಜ್ಞಾನಿಕತೆ ನೆಲೆಯಲ್ಲಿ ವಿಚಾರವಂತ ಸಮಾಜವನ್ನಾಗಿ ಪರಿವರ್ತಿಸಲು ಕೈಗೊಂಡ ಮಾರ್ಗ ತೋರಿಕೆಯದ್ದಾಗಿರದೇ ನೈಜರೂಪದ್ದಲ್ಲಿದ್ದು ಕ್ರಾಂತಿಯಾಗಿ ರೂಪಗೊಂಡಿದ್ದು ಅವಿಸ್ಮರಣೀಯವಾದದ್ದು. ವಿಜ್ಞಾನದ ಪ್ರಾಯೋಗಿಕ ಬೆಳವಣಿಗೆ ಹೊಸ ಚಿಂತನೆಗಳಿಗೆ, ಅವಿಷ್ಕಾರಗಳಿಗೆ ಹೇಗೆ ಪ್ರೋತ್ಸಾಹ ನೀಡುತ್ತದೆಯೋ ಹಾಗೆಯೇ, ಮಾನವ ಚಿಂತನೆಗಳನ್ನು ವಿಸ್ತರಿಸಿ ವಿಚಾರಪರರನ್ನಾಗಿ ವೈಚಾರಿಕ ನಿಲುವುಗಳನ್ನು ರೂಢಿಸಿಕೊಳ್ಳಲು, ಕ್ರಿಯಾಶೀಲರನ್ನಾಗಿಸಲು ಸಮಾಜವನ್ನು ಪ್ರಯೋಗಾಲಯವಾಗಿಸಿಕೊಂಡು ರಚಿಸಿದ ವಚನ ಸಾಹಿತ್ಯದ ಸಾರ ಅದ್ಭುತವಾದದ್ದಾಗಿದೆ.

## ಫಲಿತಗಳು:

ಆಧುನಿಕತೆ ಎನ್ನುವುದು ಪ್ರಸ್ತುತ ಸ್ಥಿತಿಯಲ್ಲಿ ಕೇವಲ ತಂತ್ರಜ್ಞಾನ ವಿಜ್ಞಾನ ಕ್ಷೇತ್ರಗಳಿಗೆ ಸೀಮಿತವಾಗಿರದೆ ಜನ ಜೀವನದಲ್ಲೂ ಸಾಕಷ್ಟು ಬದಲಾವಣೆಗಳು ಘಟಿಸುವುದಕ್ಕೆ ಕಾರಣವಾಗಿದೆ. ಆಧುನಿಕತೆ ಪ್ರಗತಿಯ ಧ್ಯೋತಕವಾಗಿದೆ ಎನ್ನುವುದು ಸತ್ಯವಾದರೂ, ಪ್ರಗತಿಯ ಹೆಜ್ಜೆಯೆಡೆಗೆ ದಾಪುಗಾಲು ಹಾಕುತ್ತಿರುವ ಪ್ರಸ್ತುತ ಜಗತ್ತಿನಲ್ಲಿ ವೈಜ್ಞಾನಿಕ ಅವಿಷ್ಕಾರಗಳು ಹೊಸ ಹೊಸ ಪ್ರಯೋಗಗಳ ಬರದಲ್ಲಿ ನೈಜತೆ, ನೈತಿಕತೆ, ಸಾಮಾಜಿಕ ಮೌಲ್ಯಗಳು ಗೌಣವಾಗುತ್ತಿರುವ ಚಿತ್ರಗಳು ಗೋಚರಿಸುತ್ತವೆ. ವೈಯುಕ್ತಿಕ ಪ್ರಗತಿಯತ್ತ ಮುಖಮಾಡಿರುವ ವ್ಯಕ್ತಿಯ ಚಿಂತನೆಗಳ ನಡುವೆ ಸಮಾಜಮುಖಿ ಚಿಂತನೆಗಳು ಕ್ಷೀಣಿಸುತ್ತಿರುವುದನ್ನು ಕಾಣುತ್ತಿದ್ದೇವೆ.

ಈ ಪರಿಣಾಮವಾಗಿ ಅಸೂಯೆ, ದ್ವೇಷ, ಕ್ರೌರ್ಯಗಳು ಸಮಾಜದಲ್ಲಿ ಹೆಚ್ಚುತ್ತಿರುವ ಉದಾಹರಣೆಗಳನ್ನು ಪ್ರತಿನಿತ್ಯವು ಕಾಣುತ್ತಿದ್ದೇವೆ. ಜಾತಿ. ಧರ್ಮಗಳಂತಹ ಅಸಮಧಾನಗಳು ಪುನರುತ್ತರಿಸುತ್ತಿವೆ. ಇಂತಹ ಪ್ರಕ್ಷುಬ್ಧ ಸ್ಥಿತಿಯಲ್ಲಿ ಮಾನವೀಯ ಮೌಲ್ಯಗಳು, ವೈಚಾರಿಕ ಚಿಂತನೆಗಳನ್ನು, ಸಮಾಜಮುಖಿ ಆಲೋಚನೆಗಳನ್ನು ಪ್ರೇರೇಪಿಸುವಂತಹ ವಚನಗಳ ಸಾಹಿತ್ಯದ ಮಾರ್ಗದರ್ಶನ ಪ್ರಸ್ತುತ ಸಮಾಜಕ್ಕೆ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ವಚನ ಸಾಹಿತ್ಯದ ಆಶಯವನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

ವಚನಕಾರರು ಸಮಾಜದ ಸ್ವರೂಪದ ಬಗ್ಗೆ ಚಿಂತಿಸಿ, ಸಮಾಜದ ಸರ್ವತೋಮುಖ ಬೆಳವಣಿಗೆಗೆ ಮಾರ್ಗದರ್ಶನಗಳನ್ನು ಹಾಕಿ ಕೊಟ್ಟಿದ್ದಾರೆ. ವಚನ ಸಾಹಿತ್ಯದ ವಿಶಿಷ್ಟತೆ ಎಂದರೆ ಜನಸಾಮಾನ್ಯರನ್ನು ಚಿಂತನಶೀಲರನ್ನಾಗಿ, ವಿಚಾರವಂತರನ್ನಾಗಿಸುವಂತಹದ್ದು, ಇಂಥಹ ಚಿಂತನೆ - ವಿಚಾರಗಳನ್ನೊಳಗೊಂಡ ವಚನ ಸಾಹಿತ್ಯ -ಒಂದು ಧರ್ಮ-ಸಮಾಜ-ಕಾಲ ಅಥವಾ ಶತಮಾನಕ್ಕೆ ಸೀಮಿತವಾದ ಸಾಹಿತ್ಯವಾಗಿರದೆ, ಇಡೀ ಮಾನವ ಕುಲದ ಉದ್ಧಾರ ಬಯಸುವ ಸಾಹಿತ್ಯದ ಕೃಷಿಯಾಗಿದೆ. ಜ್ಞಾನ ದೀವಿಗೆಯಂತೆ ಪ್ರಸ್ತುತಕ್ಕೂ ಮಾದರಿಯಾಗಬಲ್ಲದೆಂಬುದನ್ನು ಅಚನಗಳ ಅಧ್ಯಯನದಲ್ಲಿ ಕಂಡುಕೊಳ್ಳಬಹುದು.

## ಸಮಾರೋಪ:

ಒಟ್ಟಾರೆ ಹೇಳುವುದಾದರೆ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ 'ಜ್ಞಾನ ಮತ್ತು ವಿಜ್ಞಾನ'ಗಳ ತಿಳುವಳಿಕೆ ನಿರಂತರವಾದದ್ದು, ಈ ನಿಟ್ಟಿನಲ್ಲಿ ಆಯಾ ಕಾಲಘಟ್ಟದ ಸಾಹಿತ್ಯದ ಚಿಂತನೆಗಳು ಮತ್ತು ಅನುಭವ ಜ್ಞಾನಗಳು ತಮ್ಮದೆ ಆದ ವಿಶಷ್ಟ ಕೊಡುಗೆಗಳಾಗಿವೆ. ಎಂದರೆ ತಪ್ಪಾಗಲಾರದು. ಆಧುನಿಕ ವಿಜ್ಞಾನ-ತಂತ್ರಜ್ಞಾನ-ಜ್ಞಾನಗಳ ಜೊತೆಗೆ ಸಾಹಿತ್ಯ ಮೂಲವಾದ ಜ್ಞಾನವನ್ನು ಸೇರ್ಪಡಿಸಿಕೊಂಡು ಸಾಮಾಜಿಕ ಪರಿವರ್ತನೆಯ ಮಂತ್ರವನ್ನು ನೆಲೆಯಾಗಿಸಿಕೊಂಡು ವೈಚಾರಿಕತೆಯ ದೃಷ್ಟಿಯಲ್ಲಿ ವಿವೇಚಿಸಿ ಮೌಢ್ಯರಹಿತ ಆಧುನಿಕ ಸಮಾಜವನ್ನು ರೂಪಿಸುವ ಅಂಶಗಳನ್ನು-ಅಳವಡಿಸಿಕೊಳ್ಳಲು ಅವಶ್ಯಕವಾದ ಚಿಂತನೆಗಳನ್ನು ವಚನ ಸಾಹಿತ್ಯವು ನೀಡಿರುವ ಅನುಭವ ಜ್ಞಾನದಿಂದ ಆಯ್ದ ಕೆಲವು ವಿಚಾರಗಳ ಮೂಲಕ ಈ ಲೇಖನದಲ್ಲಿ ಪ್ರಸ್ತುತ ಪಡಿಸಲಾಗಿದೆ.

## ಪರಾಮರ್ಶನ ಗ್ರಂಥಗಳು:

೧. ಶಿವರಾಜಪ್ಪ. ಎಸ್. ಸಮಗ್ರ ಸಾಹಿತ್ಯ-೧. ಚಿಂತನಾಪಥ. ಪ್ರಸಾದ್ ಎಜೇನ್ಸಿ. ೨೦೦೯.

೨. ನಾರಾಯಣ ಪಿ.ವಿ. ವಚನ ಸಮುಗ. ವಸಂತಪ್ರಕಾಶನ. ೨೦೦೫

೩ ಅನ್ನಧಾನಯ್ಯ ಪುರಾಣಿಕ. ಚನ್ನಬಸವಣ್ಣನು ನಿರೂಪಿಸಿರುವ ಆಚಾರಗಳು. ಬಸವಪಥ. ಬೆಳ್ಳಿಬೆಳಗು. ಬಸವ ಸಮಿತಿ. ೨೦೦೩

೪. ಚಿದಾನಂದ ಮೂರ್ತಿ. ಎಂ. ವಚನ ಸಾಹಿತ್ಯ. ಬಸವಣನವರ ವಚನಗಳು. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. ೧೯೭೫.

೫. ತಿಪ್ಪೆರುದ್ರಸ್ವಾಮಿ.ಎಚ್. ವಚನ ಸಾಹಿತ್ಯ ವೈಚಾರಿಕ ಅಧ್ಯಯನ. ಪ್ರಸಾರಂಗ. ಕರ್ನಾಟಕ ವಿಶ್ವವಿದ್ಯಾಲಯ.ಧಾರವಾಡ. ೧೯೮೩